
# ಶ್ರದ್ಧೆ



ಸಾಧನೆ ಅತ್ಯಂತ ಆವಶ್ಯಕ. ಸಾಧನೆ ಮಾಡಿಯೂ ಸಾಕ್ಷಾತ್ಕಾರವಾಗದಿರಲು ಸಾಧ್ಯವೇ? ಗುರುವಾಕ್ಯದಲ್ಲಿ ನಿಜವಾದ ಶ್ರದ್ಧೆಯುಂಟಾಯಿತು ಎಂದರೆ ಮತ್ತೆ ಅಧಿಕವಾಗಿ ಕಷ್ಟಪಡಬೇಕಾಗಿಲ್ಲ. ವ್ಯಾಸರು ಇನ್ನೇನು ಯಮುನೆಯನ್ನು ದಾಟಬೇಕಾಗಿತ್ತು. ಅಷ್ಟರಲ್ಲಿ ಗೋಪಿಯರು ಅಲ್ಲಿಗೆ ಬರುತ್ತಾರೆ. ಅವರೂ ಯಮುನೆಯನ್ನು ದಾಟಬೇಕಾಗಿದೆ. ಆದರೆ ದೋಣಿ ಓಡುತ್ತಿಲ್ಲ. ಗೋಪಿಯರು ವ್ಯಾಸರಿಗೆ ಅರಿಕೆ ಮಾಡಿಕೊಂಡರು: 'ಮಹರ್ಷಿಗಳೇ, ಈಗ ನಾವು ಈ ನದಿಯನ್ನು ದಾಟುವ ಬಗೆ ಹೇಗೆ?' ವ್ಯಾಸರು ಹೇಳಿದರು: 'ಹೆದರಬೇಡಿ, ನಿಮ್ಮನ್ನು ಆಚೆ ದಡಕ್ಕೆ ತಲುಪಿಸುತ್ತೇನೆ. ಆದರೆ ಈಗ ನನಗೆ ಬಹಳ ಹಸಿವಾಗುತ್ತಿದೆ. ಏನಾದರೂ ತಿನ್ನಲು ಇದೆಯೇನು?' ಗೋಪಿಯರ ಹತ್ತಿರ ಹಾಲು, ಕೆನೆ, ಬೆಣ್ಣೆ ಬೇಕಾದಷ್ಟು ಇತ್ತು. ವ್ಯಾಸರು ಎಲ್ಲವನ್ನೂ ತಿಂದುಬಿಟ್ಟರು. ಬಳಿಕ ಗೋಪಿಯರು ಅವರನ್ನು ಕೇಳಿದರು: 'ಯಮುನೆಯನ್ನು ದಾಟುವ ಸಮಾಚಾರ ಏನಾಯ್ತು?' ವ್ಯಾಸರು ಯಮುನೆಯ ದಡಕ್ಕೆ ಹೋಗಿ ನಿಂತು ಹೇಳಿದರು : 'ಓ ಯಮುನೆ, ನಾನು ಇಂದು ಏನನ್ನೂ ತಿನ್ನದೆ ಇರುವುದು ನಿಜವಾದದ್ದೇ ಆದರೆ, ನಿನ್ನ ನೀರು ಇಬ್ಭಾಗವಾಗಿ ಬಿಡಲಿ. ನಾವೆಲ್ಲರೂ ಅದರ ಮೂಲಕ ಆಚೆ ದಡಕ್ಕೆ ಸೇರಿಬಿಡುವಂತಾಗಲಿ.' ಅವರು ಹಾಗೆ ಹೇಳಿ ನಿಲ್ಲಿಸುವುದೇ ತಡ, ನೀರು ಇಬ್ಭಾಗವಾಗಿಬಿಟ್ಟಿತು. ಗೋಪಿಯರು ಆಶ್ಚರ್ಯಚಕಿತರಾದರು. ಯೋಚಿಸಲಾರಂಭಿಸಿದರು: 'ಇವರು ಈಗ ತಾನೆ ಅಷ್ಟೊಂದು ತಿಂದರು! ಆದರೂ ಈಗ ಹೇಳಿದರಲ್ಲ—"ನಾನು ಏನೂ ತಿನ್ನದೆ ಇದ್ದರೆ....." ಎಂದು!' ವ್ಯಾಸಮಹರ್ಷಿಗೆ ಅಂಥ ದೃಢ ವಿಶ್ವಾಸವಿತ್ತು, ತಿಂದವರು ತಾವಲ್ಲ, ತಮ್ಮ ಹೃದಯಮಧ್ಯದಲ್ಲಿನ ನಾರಾಯಣ ಎಂಬುದಾಗಿ.

ಶ್ರದ್ಧೆ! ಶ್ರದ್ಧೆ! ಒಮ್ಮೆ ಒಬ್ಬ ಗುರು ತನ್ನ ಶಿಷ್ಯನಿಗೆ ಹೇಳಿದ : 'ರಾಮನೇ ಎಲ್ಲವೂ ಆಗಿದ್ದಾನೆ' ಎಂಬುದಾಗಿ. ಒಂದು ನಾಯಿ ರೊಟ್ಟಿಯನ್ನು ತಿಂದುಬಿಡುವುದರಲ್ಲಿತ್ತು, ಅದಕ್ಕೆ ಆ ಶಿಷ್ಯ ಹೇಳಿದ: 'ಓ ರಾಮ, ಸ್ವಲ್ಪ ತಾಳು, ಸ್ವಲ್ಪ ತಾಳು. ರೊಟ್ಟಿಗೆ ತುಪ್ಪ ಸವರಿ ಕೊಡುತ್ತೇನೆ.' ಗುರುವಾಕ್ಯದಲ್ಲಿ ಆತನಿಗೆ ಈ ಮಟ್ಟದ ಶ್ರದ್ಧೆ.

ಯಾವ ಕೆಲಸಕ್ಕೂ ಬಾರದವರಲ್ಲಿ ಶ್ರದ್ಧೆಯುಂಟಾಗುವುದಿಲ್ಲ. ಅವರು ಸದಾ ಸಂಶಯಗ್ರಸ್ತರು. ಆತ್ಮಸಾಕ್ಷಾತ್ಕಾರವಾಗದ ಹೊರತು ಎಲ್ಲಾ ಸಂಶಯಗಳು ನಿವೃತ್ತಿಯಾಗುವುದಿಲ್ಲ.

ಕೃಷ್ಣಕಿಶೋರನದು ಎಂಥ ಅದ್ಭುತ ವಿಶ್ವಾಸ! ಅವನು ಹೇಳುತ್ತಿದ್ದ: 'ನಾನು ಭಗವಂತನ ಹೆಸರನ್ನು ಒಮ್ಮೆ ಉಚ್ಚರಿಸಿದ್ದೇನೆ. ನನ್ನಲ್ಲಿ ಇನ್ನು ಪಾಪ ಅಂದರೇನು? ನಾನು ಶುದ್ಧ ನಿರ್ಮಲ ವ್ಯಕ್ತಿಯಾಗಿಬಿಟ್ಟಿದ್ದೇನೆ'. ಯಾರು ರಾಮನಾಮ ಮತ್ತು ಕೃಷ್ಣನಾಮ ಜಪಿಸುತ್ತಾನೊ, ಆತನ ಭೌತದೇಹ ಚಿನ್ಮಯದೇಹವಾಗಿಬಿಡುತ್ತದೆ. ಎಲ್ಲವೂ ಆತನ ಕಣ್ಣಿಗೆ ಚಿನ್ಮಯವಾಗಿ ಕಂಡುಬರುತ್ತದೆ—'ಚಿನ್ಮಯ ಶ್ಯಾಮ, ಚಿನ್ಮಯ ಧಾಮ.'

ಶ್ರದ್ಧೆಯಿಲ್ಲದೆ ಪೂಜೆ, ಜಪ, ತಪ ಇವನ್ನು ಮಾಡಿದರೆ ಏನೂ ದೊರೆಯುವುದಿಲ್ಲ. ಭಗವದ್ರೂಪದಲ್ಲಿ ಶ್ರದ್ಧೆ ಯನ್ನಿಡಬೇಕು. ಸಚ್ಚಿದಾನಂದನೇ ಗುರುರೂಪ ಧರಿಸಿ ಬರುತ್ತಾನೆ. ಮನುಷ್ಯ-ಗುರುವಿನಿಂದ ದೀಕ್ಷೆಯನ್ನು ಪಡೆದ ವ್ಯಕ್ತಿ ಆತನನ್ನು ಕೇವಲ ಮನುಷ್ಯ ಅಂತ ಭಾವಿಸಿದ್ದೇ ಆದರೆ, ಆ ದೀಕ್ಷಿತನಿಗೆ ಯಾವ ಉನ್ನತಿಯೂ ಉಂಟಾಗದು. ಆತನನ್ನು ಸಾಕ್ಷಾತ್ ಭಗವಂತನೇ ಎಂಬುದಾಗಿ ಭಾವಿಸಿದರೆ ತಾನೆ ದೀಕ್ಷಿತನಿಗೆ ಮಂತ್ರದಲ್ಲಿ ಶ್ರದ್ಧೆ ಯುಂಟಾಗುವುದು. ಶ್ರದ್ಧೆಯೊಂದು ಉಂಟಾಯಿತು ಎಂದರೆ ಎಲ್ಲಾ ದೊರೆತಹಾಗೆಯೇ. ಕಾಡಿನ ಹುಡುಗ ಏಕಲವ್ಯ ದ್ರೋಣನ ಮಣ್ಣಿನ ಪ್ರತಿಮೆಯನ್ನು ತನ್ನ ಮುಂದಿಟ್ಟುಕೊಂಡು ಧನುರ್ವಿದ್ಯೆಯಲ್ಲಿ ಪಾರಂಗತನಾದನು. ದ್ರೋಣನ ಮಣ್ಣಿನ ಪ್ರತಿಮೆಯನ್ನೇ ಸಾಕ್ಷಾತ್ ದ್ರೋಣನೆಂದು ಭಾವಿಸಿ ಆತ ಅದನ್ನು ಪೂಜಿಸುತ್ತಿದ್ದ. ಅದಕ್ಕಾಗಿಯೇ ಆತನು ಧನುರ್ವಿದ್ಯೆಯಲ್ಲಿ ಸಿದ್ಧಪುರುಷನಾದ.

ಒಮ್ಮೆ ಒಬ್ಬರು ಒಬ್ಬ ಹುಡುಗನಿಗೆ ಹೇಳಿದರು, ಭಗವಂತ ನಮ್ಮನ್ನು ಸೃಷ್ಟಿಸಿದ್ದಾನೆ ಎಂಬುದಾಗಿ. ಆ ಹುಡುಗ ತನ್ನ ಪ್ರಾರ್ಥನೆಯನ್ನೆಲ್ಲಾ ಒಂದು ಕಾಗದದಲ್ಲಿ ಬರೆದು, ಅಂಚೆಪೆಟ್ಟಿಗೆಗೆ ಹಾಕಿದ. ಆ ಕಾಗದದ ಮೇಲೆ 'ವೈಕುಂಠ' ಎಂಬುದಾಗಿ ವಿಳಾಸ ಬರೆದಿತ್ತು. ಆ ಹುಡುಗನಿಗಿದ್ದ ಶ್ರದ್ಧೆ ಉಂಟಾಗುವುದಾದರೆ, ಆಗ ಭಗವಂತನ ಸಾಕ್ಷಾತ್ಕಾರ ದೊರೆತುಬಿಡುತ್ತದೆ.

ಕೃಷ್ಣಕಿಶೋರ ಹೇಳುತ್ತಿದ್ದ:'ಓಂ ಕೃಷ್ಣ, ಓಂ ರಾಮ' ಎಂಬುದಾಗಿ ಉಚ್ಚರಿಸಿದ ಮಾತ್ರದಿಂದಲೇ ಕೋಟಿ ಸಂಧ್ಯೆಗಳ ಫಲ ದೊರೆಯುತ್ತದೆ. ಒಮ್ಮೆ ಆತ ಗೋಪ್ಯವಾಗಿ ತಿಳಿಸಿದ, 'ಯಾರಿಗೂ ಹೇಳಬೇಡಿ—ಈಗ ನನಗೆ ಸಂಧ್ಯೆ ಮುಂತಾದವು ರುಚಿಸುತ್ತಿಲ್ಲ' ಎಂದು.

ನಿಜವಾದ ಶ್ರದ್ಧೆಯಿಂದಲೇ ಆತನ ಸಾಕ್ಷಾತ್ಕಾರ ಪಡೆದು ಕೊಂಡು ಬಿಡಬಹುದು. ಭಗವಂತನ ಸಂಬಂಧವಾಗಿ ಹೇಳಿರುವುದರಲ್ಲೆಲ್ಲಾ ಪೂರ್ಣ ಶ್ರದ್ಧೆಯಿಡುವುದಾದರೆ, ಸಾಕ್ಷಾತ್ಕಾರ ಇನ್ನೂ ಬೇಗ ದೊರೆತು ಬಿಡುತ್ತದೆ. ಹಸು ಆರಿಸಿಕೊಂಡು ಮೇವು ಮೇಯ್ದರೆ ಕಡಿಮೆ ಹಾಲು ಕೊಡುತ್ತದೆ. ಆದರೆ ಅದು ಎಲ್ಲಾ ವಿಧದ ಗಿಡ ಗಡ್ಡೆಗಳನ್ನು ತಿಂದಿತು ಎಂದರೆ, ಧಾರಾಕಾರವಾಗಿ ಹಾಲು ಕರೆಯುತ್ತದೆ. ಭಗವಂತನಲ್ಲಿ ಶ್ರದ್ಧೆಯುಂಟಾಗಿಬಿಟ್ಟಿದ್ದೇ ಆದರೆ ಮನುಷ್ಯ ಎಂಥ ಪಾಪ ಕಾರ್ಯಗಳನ್ನು ಮಾಡಿರಲಿ ಅಥವಾ ಮಹಾಪಾತಕ ಕಾರ್ಯಗಳನ್ನು ಮಾಡಿರಲಿ ಆತ ಯಾವುದಕ್ಕೂ ಹೆದರಬೇಕಾಗಿಲ್ಲ.

ಶ್ರೀರಾಮಕೃಷ್ಣ ವಚನವೇದ ದಿಂದ